ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ :— ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿಯಲ್ಲಿ ಬಸ್ ಡಿಪೋ ತೆಗೆಯಲೆಂದು ಈಗಾಗಲೇ ಆರು ಎಕರೆ ಜಮೀನನ್ನು ಕೊಡುವ ಸಲುವಾಗಿ ಒಪ್ಪಿಗೆ ಪತ್ರವನ್ನು ಬರೆಸಿ ಎಂ.ಡಿ.ಯವರಿಗೆ ಕೊಡಲಾಗಿದೆ. ಬಿಜಾಪುರ ಜಿಲ್ಲೆಯ 5 ತಾಲ್ಲೂಕುಗಳಲ್ಲೂ ಬಸ್ ಡಿಪೋ ಇದ್ದು ಬಸವನಬಾಗೇವಾಡಿಯಲ್ಲೂ ಕೂಡ ಬಸ್ ಡಿಪೋ ಅವಶ್ಯಕತೆ ಇರುವುದರಿಂದ ಮತ್ತು ಈಗ ತಿಳಿಸಿರುವ ಜಾಗವು ಯೋಗ್ಯವಾದ ಸ್ಥಳ ಕೂಡ ಆಗಿರುವುದರಿಂದ ಇದೇ ವರ್ಷ ಬಸ್ ಡಿಪೋವನ್ನು ಅಲ್ಲಿ ಪ್ರಾರಂಭಿಸಬೇಕೆಂದು ಸಚಿವರಲ್ಲಿ ವಿನಂತಿಸುತ್ತೇನೆ

ಶ್ರೀ ಸಿ.ಆರ್. ಸಗೀರ್ ಅಹಮದ್ :— ಸದಸ್ಯರ ಕಳಕಳಿ ಅರ್ಥವಾಗಿದೆ. ಆದರೆ ಅವರು ಹೇಳಿರುವ 6 ಎಕರೆ ಜಮೀನನ್ನು ಇನ್ನು ನನ್ನ ಸಾರಿಗೆ ಸಂಸ್ಥೆಗೆ ಹಸ್ತಾಂತರಿಸಿಲ್ಲ. ಆ ಜಮೀನು ಸಾರಿಗೆ ಸಂಸ್ಥೆಗೆ ಹಸ್ತಾಂತರವಾದ ತಕ್ಷಣವೇ ಬಸ್ ಘಟಕವನ್ನು ನಾವು ಪ್ರಾರಂಭ ಮಾಡುತ್ತೇವೆ.

ಅಧ್ಯಕ್ಷರು :— ಶಿವಣ್ಣನವರೆ ತಮ್ಮ ಪ್ರಶ್ನೆಗೆ ಉತ್ತರಿಸಲು ಕಂದಾಯ ಸಚಿವರು ಹಾಲಾವಕಾಶವನ್ನು ಕೇಳಿದ್ದಾರೆ. ಶ್ರೀ ಕಂಠಯ್ಯನವರೆ ಬುಧವಾರದೊಳಗೆ ಅವರಿಗೆ ಉತ್ತರ ತರಿಸಿಕೊಡಲು ಆಗುತ್ತದೆಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :— ಮಾನ್ಯ ಸದಸ್ಯರು ಹಳ್ಳಿಯಿಂದ ಹಿಡಿದು ದಿಲ್ಲಿಯವರೆಗೂ ಫುಲ್ ಡೀಟೈಲ್ಸ್ ಕೇಳಿಬಿಟ್ಟಿದ್ದಾರೆ. ಆದಕಾರಣ ಬುಧವಾರದೊಳಗೆ ಉತ್ತರ ಕೊಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ :— ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವುದು ಒಂದು ಹಳ್ಳಿಗೆ ಸಂಬಂಧಪಟ್ಟ ಉತ್ತರ ಮಾತ್ರ. ಆದರೆ ಸಚಿವರು ಹಳ್ಳಿಯಿಂದ ದಿಲ್ಲಿಯವರೆಗಿನ ಡೀಟೈಲ್ಸ್ ಕೇಳಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ ಸದಸ್ಯರು ಕೇಳಿರುವುದು ಕೇವಲ ಒಂದು ಹಳ್ಳಿಯ ವಿವರ.

ರಾಜ್ಯದಲ್ಲಿ ಕೃಷಿ ಮಾರುಕಟ್ಟೆ ಶುಲ್ಕ ಸಂಗ್ರಹಣೆ.

486(4585) ಶ್ರೀ ಎಸ್. ಅಂಗಾರ (ಸೂಳ್ಯ) :— ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1997-98 ರಿಂದ 1999-2000ರವರೆಗೆ ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಯಾವ ಯಾವ ಕೃಷಿ ಹುಟ್ಟುವಳಿಗಳಿಂದ ಎಷ್ಟೆಷ್ಟು ಮಾರುಕಟ್ಟೆ ಶುಲ್ಕವನ್ನು ಸಂಗ್ರಹಿಸಲಾಗಿದೆ. (ವರ್ಷವಾರು, ಹುಟ್ಟುವಳಿವಾರು, ಪೂರ್ತಿ ವಿವರ ನೀಡುವುದು)

1997-88 ರಿಂದ 1999-2000ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಯಾವ ಯಾವ ಕೃಷಿ ಹುಟ್ಟುವಳಿಗಳಿಂದ ಎಷ್ಟೆಷ್ಟು ಮಾರುಕಟ್ಟೆ ಶುಲ್ಕವನ್ನು ಸಂಗ್ರಹಿಸಲಾಗಿದೆ. (ತಾಲ್ಲೂಕುವಾರು, ಹುಟ್ಟುವಳಿವಾರು, ವರ್ಷವಾರು ಮಾಹಿತಿ ನೀಡುವುದು)?

ಶ್ರೀ ಆರ್.ಬಿ. ತಿಮ್ಮಾಪುರ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :—

ಅ) ಅನುಬಂಧ - 1ರಲ್ಲಿ ವಿವರ ನೀಡಲಾಗಿದೆ.

ಆ) ಅನುಬಂಧ - 2ರಲ್ಲಿ ವಿವರ ನೀಡಲಾಗಿದೆ.

ಅನುಬಂಧ - 1

1997-98 ರಿಂದ 1999-2000 ರವರೆಗೆ ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ವಸೂಲಿಯಾದ ಹುಟ್ಟುವಳಿವಾರು ಮಾರುಕಟ್ಟೆ ಶುಲ್ಕದ ವಿವರ:

ಕ್ರ. ಸಂ.	ಹುಟ್ಟುವಳಿಯ ಹೆಸರು	ಮಾರುಕಟ್ಟೆ ಶುಲ್ಕ (ಲಕ್ಷ ರೂ.ಗಳಲ್ಲಿ) 1997-98	19989-99	1999-2000
ಅ.	ಆಹಾರಧಾನ್ಯಗಳು:			
1.	ಭತ್ತ	797.44	977.13	1077.85
2.	ಅಕ್ಕಿ	477.54	653.7	606.06
3.	ಜೋಳ	46.26	62.76	69.00
4.	ರಾಗಿ	38.18	39.13	45.54
5.	ಮೆಕ್ಕೆಜೋಳ	213.39	312.36	298.69
6.	ಸಜ್ಜೆ	5.05	18.76	20.82
7.	ಗೋಧಿ	22.27	16.56	33.05
8.	ನವಣೆ	0.87	0.82	1.07
9.	ನವಣೆ ಅಕ್ಕಿ	0.90	0.05	10.45
10.	ಸಾವೆ	1.27	2.23	2.85
11.	ಸಮಿ	0.03	0.72	2.49
	ಒಟ್ಟು ರೂ.	1598.00	2084.22	2167.87
ಅ.	ದ್ವಿದಳ ಧಾನ್ಯಗಳು			
12.	ತೊಗರಿ	88.82	93.98	159.20
13.	ತೊಗರಿ ಬೇಳೆ	124.13	139.49	89.58
14.	ಕಡಲೆಕಾಳು	54.57	47.32	67.87

1	2	3	4	5
15.	ಕಡಲೇಬೇಳೆ	50.82	73.20	35.21
16.	ಉದ್ದಿನಕಾಳು	13.46	11.76	25.92
17.	ಉದ್ದಿನಬೇಳೆ	46.67	52.78	43.17
18.	ಹೆಸರುಕಾಳು	101.34	148.79	115.58
19.	ಹೆಸರುಬೇಳೆ	32.06	19.63	24.39
20.	ಹುರುಳಿ	5.79	10.36	9.22
21.	ಅವರೆ	1.64	2.66	2.38
22.	ಬೇಳೆ	6.27	6.00	4.40
23.	ಅಲಸಂದೆ	8.28	13.07	10.10
24.	ಮಸೂರಿ	0.05	-	3.91
25.	ಬೇಳೆ	0.17	-	3.39
26.	ಬಟಾಣಿ	0.55	0.77	5.52
27.	ಮಡಕಿ	0.09	0.08	0.21
	ಒಟ್ಟು ರೂ.	534.71	619.81	599.45
೫.	ಎಣ್ಣೆ ಬೀಜಗಳು			
28.	ಶೇಂಗಾ	328.66	361.03	341.30
29.	ಬೀಜ	26.76	35.18	18.51
30.	ಎಳ್ಳು	...	33.12	28.40
31.	ಹುಚ್ಚೆಳ್ಳು	2.63	3.31	3.17
32.	ಸೂರ್ಯಕಾಂತಿ	143.74	109.72	83.81
33.	ಕುಸುಮೆ	6.37	3.75	4.45
34.	ಹತ್ತಿಬೀಜ	0.02	0.03	0.04
35.	ಸಾಸಿವೆ	0.66	0.37	0.36
36.	ಹರಳು	2.46	3.40	1.84
37.	ಹೊಂಗೇಬೀಜ	1.85	2.21	1.78
38.	ಹಿಪ್ಪೆಬೀಜ	0.19	0.31	0.81
39.	ಬೇವಿನಬೀಜ	2.93	2.11	4.74
40.	ಆಗಸೇಬೀಜ	0.36	0.07	0.10
41.	ಪುಂಡಿಬೀಜ	0.01	0.01	0.02
	ಒಟ್ಟು ರೂ.	540.51	554.62	489.33

1	2	3	4	5
ಈ.	ಸಾಂಬಾರ ಪದಾರ್ಥಗಳು			
42.	ಒಣಮೆಣಸಿನಕಾಯಿ	149.01	175.36	214.69
43.	ಧನಿಯಾ	20.33	22.21	14.85
44.	ಕಾಳುಮೆಣಸು	10.83	23.03	59.84
45.	ಒಣಶುಂಠಿ	1.96	1.87	2.62
46.	ಬೆಳ್ಳುಳ್ಳಿ	53.00	53.03	29.86
47.	ಮೆಂತ್ಯ	0.002	0.0009	0.002
48.	ಹುಣಸೇ ಹಣ್ಣು	19.98	31.15	30.57
49.	ಅರಶಿಣ	0.33	0.18	0.96
50.	ಗೋಡಂಬಿ	73.61	53.73	77.33
51.	ಹುಣಸೇಕಾಯಿ	0.001	0.007	0.05
	ಒಟ್ಟು ರೂ.	329.053	360.5579	431.102
ಉ.	ನೂಲು ಮತ್ತು ನಾರು			
52.	ಹತ್ತಿ	679.11	675.36	616.12
53.	ಅರಳೆ	22.93	13.58	19.90
54.	ಪಂಡಿನಾರು	0.01	0.001	-
55.	ಸೆಣಬಿನನಾರು	0.02	0.0007	-
	ಒಟ್ಟು ರೂ.	702.07	688.9417	636.02
	ಮಾದಕ ಪದಾರ್ಥಗಳು			
56.	ಅಡಿಕೆ	769.33	955.96	1072.23
57.	ಅಡಿಕೆ ಕಾಯಿ	0.37	0.31	
58.		ಅಧಿಸೂಚನೆ ಹುಟ್ಟುವಳಿಯಿಲ್ಲ		
	ಒಟ್ಟು ರೂ	769.70	956.27	1072.23
59.	ವೀಳ್ಯದೆಲೆ	6.41	5.20	4.18

1	2	3	4	5
ಕಬ್ಬಿನ ಉತ್ಪನ್ನಗಳು				
60.	ಬೆಲ್ಲ	200.00	253.44	256.66
61.	ಕಂಪುಸಕ್ಕರೆ	0.38	0.63	0.11
	ಒಟ್ಟು ರೂ.	200.38	254.07	255.77
ತರಕಾರಿಗಳು				
62.	ಈರುಳ್ಳಿ	248.09	289.68	224.06
63.	ಆಲೂಗೆಡ್ಡೆ	116.25	110.98	126.30
64.	ಹಸಿಮೆಣಸಿನಕಾಯಿ	5.74	5.47	11.10
65.	ಗೆಣಸು	5.69	7.38	5.60
66.	ಬೀನ್ಸ್	4.37	3.31	4.03
67.	ಟೊಮೇಟೋ	19.40	27.83	4.93
68.	ಬದನೆಕಾಯಿ	1.25	1.69	2.46
69.	ಕ್ಯಾರೆಟ್	4.26	2.62	3.14
70.	ಎಲೆಕೋಸು	4.05	7.63	8.10
71.	ಗೆಡ್ಡೆಕೋಸು	1.54	0.72	0.79
72.	ಹಸಿಶುಂಠಿ	12.38	17.18	34.66
73.	ಹೂಕೋಸು	2.61	0.94	1.55
74.	ಬೀಟ್‌ರೂಟ್	2.40	1.62	1.58
75.	ಅವರೆಕಾಯಿ	0.70	0.48	0.73
76.	ಬೆಂಡೆಕಾಯಿ	0.84	1.28	1.21
77.	ಅಲಸಂದಿ	0.11	0.11	0.11
78.	ತೊಂಡೆಕಾಯಿ	0.33	0.66	4.48
79.	ಸೀಮೆ ಬದನೆಕಾಯಿ	2.11	0.38	0.18
80.	ಸೋರೆಕಾಯಿ	0.36	0.11	0.31
81.	ಪಡವಲಕಾಯಿ	0.68	0.35	0.11

1	2	3	4	5
82.	ಸೌತೆಕಾಯಿ	2.33	2.70	3.56
83.	ಚಪ್ಪರದವರೆಕಾಯಿ	0.09	0.21	0.34
84.	ಗೋರಿಕಾಯಿ	0.18	0.08	0.23
85.	ತೊಗರಿಕಾಯಿ	0.24	0.05	0.15
85.	ಅಡಿಗೆ ಬಾಳೇಕಾಯಿ	0.69	0.47	1.05
87.	ಅಡಿಗೆ ಮಾವಿನಕಾಯಿ	0.26	0.02	0.40
88.	ಬೂದು ಕುಂಬಳಕಾಯಿ	0.82	0.97	0.79
89.	ಬದನೆ	2.31	2.27	6.71
90.	ನುಗ್ಗೇಕಾಯಿ	1.77	1.97	2.23
91.	ಮೂಲಂಗಿ	0.60	0.62	0.60
92.	ಸುವರ್ಣಗೆಡ್ಡೆ	0.70	0.93	0.44
93.	ಹೀರೇಕಾಯಿ	0.60	0.61	0.72
94.	ಸಿಹಿಗುಂಬಳ	0.52	0.65	0.86
95.	ದಪ್ಪಮೆಣಸಿನಕಾಯಿ	0.20	0.09	0.33
96.	ಹಾಗಲಕಾಯಿ	0.19	0.23	1.16
97.	ಇತರೆ ತರಕಾರಿಗಳು	0.28	-	-
	ಒಟ್ಟು ರೂ.	444.94	492.49	451.00
98.	ತೆಂಗಿನಕಾಯಿ	90.25	126.84	156.62
99.	ಎಳನೀರು	10.11	18.13	18.14
	ಒಟ್ಟು ರೂ.	100.36	144.97	174.76
ಹಣ್ಣುಗಳು				
100.	ಬಾಳೆಹಣ್ಣು	15.59	4.96	37.24
101.	ದ್ರಾಕ್ಷಿ	4.40	2.55	3.45
102.	ನಿಂಬೇಹಣ್ಣು	24.85	8.33	7.59
103.	ಕಿತ್ತಲೆಹಣ್ಣು	3.08	5.45	4.94

1	2	3	4	5
104.	ಮಾವಿನಹಣ್ಣು	6.02	6.98	25.78
105.	ಮಾವಿನಕಾಯಿ	4.46	0.35	0.16
106.	ಅನಾನಸ್	1.16	1.06	2.64
107.	ಕಲ್ಲಂಗಡಿ	0.11	0.45	0.82
108.	ಸೀಬೇಹಣ್ಣು	0.001	0.10	0.07
109.	ಹಲಸು	0.001	0.006	0.02
110.	ಪರಂಗಿಹಣ್ಣು	0.50	0.20	0.81
111.	ಸೇಬು	10.38	13.49	13.33
112.	ಮೂಸಂಬಿ	5.93	5.36	6.25
113.	ಮರಸೇಬು	0.04	-	-
114.	ಸಪೋಟ	0.91	0.84	2.63
115.	ದಾಳಿಂಬೆ ಹಣ್ಣು	3.34	3.63	1.48
116.	ಕರಬೂಜ ಹಣ್ಣು	--	--	--
117.	ಗೋರಿಹಣ್ಣು	-	0.05	0.16
118.	ಇತರೆ ಹಣ್ಣುಗಳು	0.02	-	0.005
	ಒಟ್ಟು ರೂ.	80.792	53.302	107.385
ಇತರೆ ಪದಾರ್ಥಗಳು				
119.	ಕೊಬ್ಬರಿ	139.03	142.79	164.90
120.	ಸೀಗೇಕಾಯಿ	4.85	4.10	4.08
121.	ಆಂಟುವಾಳ	2.73	2.37	3.39
122.	ಸೀಗು	3.81	1.47	4.64
123.	ಹುಣಸೇಬೀಜ	3.39	2.30	1.47
124.	ಕೊಬ್ಬರಿಕೊಟ್ಟು	6.42	9.66	8.15
125.	ಸೆಣಬು ಬೀಜ	-	-	-
126.	ಗೇರುಬೀಜದ ತಿರುಳು	16.73	52.63	40.83
127.	ಅಂಬಾದ ಬೀಜ	-	-	-
	ಒಟ್ಟು ರೂ.	176.96	215.22	227.43

1	2	3	4	5
ಅರಣ್ಯೋತ್ಪನ್ನಗಳು				
128.	ದಿಮ್ಮಿಗಳು	68.29	62.62	38.35
129.	ಬೊಂಬುಗಳು	0.009	0.004	9.01
130.	ಪಲಾವು ಮತ್ತು ಎಲೆಗಳು	1.20	-	-
131.	ಮರಮುಟ್ಟುಗಳು	4.64	5.56	5.89
132.	ಉರುವಲು ಕಟ್ಟಿಗೆ	0.05	1.97	10.20
133.	ಬೆತ್ತ	0.05	0.19	1.70
134.	ಇತರೆ	0.003		
	ಒಟ್ಟು ರೂ.	71.242	70.344	56.15
ಜಾನುವಾರುಗಳು				
135	ಹಸು	3.09	4.25	6.55
136.	ಎತ್ತು	9.24	8.85	8.68
137.	ಹೋರಿ	4.16	7.19	5.19
138.	ಹಸುವಿನಕರುಗಳು	0.09	0.11	0.09
139.	ಎಮ್ಮೆ	5.60	9.18	5.98
140.	ಕೋಣ	0.29	0.39	0.39
141.	ಎಮ್ಮೆಕರುಗಳು	0.18	0.74	0.07
142.	ಕುರಿ	4.42	5.55	5.39
143.	ಮೇಕೆ	2.61	3.33	3.20
144.	ಕುಕ್ಕುಟಗಳು	0.02	0.01	0.20
145.	ಇತರೆ	-	0.04	0.09
	ಒಟ್ಟು ರೂ.	29.70	39.871	35.83

ಅನುಬಂಧ - 2

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ
ತಾಲ್ಲೂಕುವಾರು ಹುಟ್ಟುವಳಿವಾರು ಮಾರುಕಟ್ಟೆ ಶುಲ್ಕದ ವಿವರ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಹುಟ್ಟುವಳಿ ಹೆಸರು	1999-2000				
		ಬಂಟ್ವಾಳ	ಮಂಗಳೂರು	ಪುತ್ತೂರು	ಸುಳ್ಯ	ಬೆಳ್ತಂಗಡಿ
1.	ಅಡಿಕೆ	19.47	126.43	36.71	18.25	7.08
2.	ಹಣ್ಣಡಿಕೆ	-	02	0.11	0.14	6.15
3.	ಅಕ್ಕಿ	2.17	0.15	2.55	1.43	4.20
4.	ಭತ್ತ	0.40	1.35	0.02	-	4.22
5.	ಗೇರುಬೀಜ	0.41	0.74	17.28	16.59	0.35
6.	ಗೇರುಬೀಜ ತಿರುಳು	0.10	4.58	0.21	0.76	-
7.	ಮೆಣಸು	0.23	13.16	3.21	0.026	0.02
8.	ಬೆಲ್ಲ	0.12	5.84	1.51	-	0.005
9.	ತೆಂಗು	0.0033	4.36	0.07	0.81	0.39
10.	ಕೊಬ್ಬರಿ	0.05	13.64	0.94	0.66	0.02
11.	ಮರ	0.0008	0.19	0.33	0.70	-
12.	ಗೆಣಸು	-	0.03	-	-	-
13.	ಬಾಳೇಕಾಯಿ	-	0.98	0.03	0.02	0.075
14.	ಶುಂಠಿ	-	0.20	0.04	0.61	0.04
15.	ಹಳುಮೆಣಸು	-	1.82	0.23	0.57	-
16.	ಮಾವು	-	0.03	-	-	-
	ಒಟ್ಟು ರೂ.	22.9541	170.52	63.24	40.589	16.55

ಬೆಳ್ತಂಗಡಿ ಮಾರುಕಟ್ಟೆ ಸಮಿತಿಯು ದಿನಾಂಕ: 01-04-99ರಂದ ಕಾರ್ಯನಿರ್ವಹಿಸುತ್ತಿದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಹುಟ್ಟುವಳಿ ಹೆಸರು	1998-99			
		ಬಂಟ್ವಾಳ	ಮಂಗಳೂರು	ಪುತ್ತೂರು	ಸುಳ್ಯ
1.	ಅಡಿಕೆ	14.69	131.46	26.21	14.46
2.	ಹಣ್ಣಡಿಕೆ	0.002	0.05	0.14	0.08
3.	ಅಕ್ಕಿ	1.96	35.40	1.92	1.18
4.	ಭತ್ತ	0.55	2.23	0.007	--
5.	ಗೇರುಬೀಜ	0.25	1.04	11.21	6.85
6.	ಮೆಣಸು	0.008	1.29	1.96	0.79
7.	ಬೆಲ್ಲ	0.10	5.89	1.41	--
8.	ತೆಂಗು	0.002	1.26	0.08	0.56
9.	ಕೊಬ್ಬರಿ	0.06	17.93	1.35	0.19
10.	ಮರ	--	0.19	0.12	0.16
11.	ಗೆಣಸು	--	0.06	--	--
12.	ಬಾಳೇಕಾಯಿ	--	0.85	0.04	0.02
13.	ಶುಂಠಿ	--	0.73	--	0.71
14.	ಕಾಳುಮೆಣಸು	--	1.35	0.13	0.24
15.	ಮಾವು	--	0.005	--	--
	ಒಟ್ಟು ರೂ.	7.622	199.735	44.577	25.24

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಹುಟ್ಟುವಳಿ ಹೆಸರು	1997-98			
		ಬಂಟ್ವಾಳ	ಮಂಗಳೂರು	ಪುತ್ತೂರು	ಸುಳ್ಯ
1.	ಅಡಿಕೆ	10.25	127.07	25.67	12.18
2.	ಹಣ್ಣಡಿಕೆ	0.01	0.11	0.07	0.08
3.	ಅಕ್ಕಿ	1.68	33.06	1.37	0.81
4.	ಭತ್ತ	0.53	5.98	0.003	--
5.	ಗೇರುಬೀಜ	0.63	3.84	15.82	9.29
6.	ಗೇರುಬೀಜದ ತಿರುಳು	0.09	5.73	0.11	0.25
7.	ಮೆಣಸು	0.17	7.99	0.23	0.004
8.	ಬೆಲ್ಲ	0.13	5.60	1.59	--
9.	ತೆಂಗು	0.005	1.39	0.06	0.86
10.	ಕೊಬ್ಬರಿ	0.02	15.85	0.87	0.22
11.	ಮರ	--	--	0.09	0.71
12.	ಗೆಣಸು	--	0.07	0.0001	--
13.	ಬಾಳೆಕಾಯಿ	--	0.93	0.02	--
14.	ಶುಂಠಿ	--	0.85	0.03	0.49
15.	ಇಳುಮೆಣಸು	--	1.70	0.15	0.51
16.	ಮಾವು	--	0.015	--	--
	ಒಟ್ಟು ರೂ.	13.515	210.185	45.88	25.40

ಶ್ರೀ ಎಸ್. ಅಂಗಾರ :— ಮಾನ್ಯ ಅಧ್ಯಕ್ಷರೆ, 1997-98 ರಿಂದ 1999-2000ರವರೆಗೆ ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಯಾವ ಯಾವ ಕೃಷಿ ಹುಟ್ಟುವಳಿಗಳಿಂದ ಎಷ್ಟೆಷ್ಟು ಮಾರುಕಟ್ಟೆ ಶುಲ್ಕವನ್ನು ಸಂಗ್ರಹಿಸಲಾಗಿದೆ ಎಂದು ಕೇಳಿದ್ದೇನೆ. ಏಕೆ ಈ ಪ್ರಶ್ನೆಯನ್ನು ಕೇಳಿದೆನೆಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1997-98ರಲ್ಲಿ 25.40 ಲಕ್ಷ ರೂಪಾಯಿಗಳ ತೆರಿಗೆ ಸಂಗ್ರಹವಾಗಿತ್ತು, 1998-99ರಲ್ಲಿ 25.24 ಲಕ್ಷ ರೂಪಾಯಿಗಳ ತೆರಿಗೆ ಸಂಗ್ರಹವಾಗಿದ್ದು 1999-2000 ರಲ್ಲಿ 40.58 ಲಕ್ಷ ರೂಪಾಯಿಗಳು ಸಂಗ್ರಹವಾಗಿದೆ. 1999-2000ದ ಸಾಲಿನಲ್ಲಿ ಅತಿ ಹೆಚ್ಚು ತೆರಿಗೆ ಸಂಗ್ರಹವಾಗಿದೆ. ಆದರೆ ಈ ಮಧ್ಯೆ ಅನಧಿಕೃತವಾಗಿ ವ್ಯಾಪಾರಸ್ಥರು ತೆರಿಗೆಯನ್ನು ಕೊಡದೇ ಕದ್ದು ಮಾರಾಟ ಮಾಡುತ್ತಿರುವ ಬಗ್ಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುತ್ತದೆಯೇ ಎಂಬ ಬಗ್ಗೆ ಹೇಳಬೇಕು.

ಶ್ರೀ ಆರ್.ಬಿ. ತಿಮ್ಮಾಪುರ್ :— ಅಧ್ಯಕ್ಷರೆ, ಪ್ರತಿ ವರ್ಷ ಅವಕಗಳ ಮೇಲೆ ಶುಲ್ಕ ಬರತಕ್ಕಂಥ ವ್ಯವಸ್ಥೆ ಇದೆ. ಧಾರಣೆ ಹಾಗೂ ಅವಕದ ಮೇಲಿರತಕ್ಕಂಥ ಈ ವ್ಯವಸ್ಥೆಯಲ್ಲಿ ಪ್ರತಿ ವರ್ಷ ನಾವು ಹೆಚ್ಚಿಗೆ ಶುಲ್ಕ ವಸೂಲಿ ಮಾಡುತ್ತಾ ಇರತಕ್ಕಂಥ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. 1996-97ರಲ್ಲಿ 55 ಕೋಟಿ ರೂಪಾಯಿಗಳು ಇದ್ದರೆ 1997-98ರಲ್ಲಿ 58 ಕೋಟಿ ರೂಪಾಯಿಗಳು 1998-99ರಲ್ಲಿ 70 ಕೋಟಿ ರೂಪಾಯಿಗಳು 1999-2000ರಲ್ಲಿ 73 ಕೋಟಿ ರೂಪಾಯಿಗಳಾಗಿದ್ದು ನಾವು ಪ್ರತಿವರ್ಷ ಇದನ್ನು ಹೆಚ್ಚು ಮಾಡುತ್ತಾ ಬಂದಿದ್ದೇವೆ. ಈ ಅನುಸರಣೆಯಿಂದಲೇ ಸುಳ್ಯ ಹಾಗೂ ಪುತ್ತೂರಿನಲ್ಲೂ ಕೂಡ ಶುಲ್ಕ ವಸೂಲಾತಿ ಹೆಚ್ಚಾಗುತ್ತಾ ಬಂದಿದೆ. ಈ ರೀತಿಯ ವ್ಯವಸ್ಥೆ ಇದ್ದರೂ ಕೂಡ ವ್ಯಾಪಾರಸ್ಥರು ತೆರಿಗೆ ಕೊಡದೆ ಕಳ್ಳತನದಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ ಸದಸ್ಯರು ನಮಗೆ ಮಾಹಿತಿ ಕೊಟ್ಟರೆ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಎಸ್. ಅಂಗಾರ :— ಅಧ್ಯಕ್ಷರೆ, 1999-2000ನೇ ಸಾಲಿನಲ್ಲಿ 40.58 ಲಕ್ಷ ರೂಪಾಯಿಗಳ ತೆರಿಗೆ ವಸೂಲಿಯಾಗಲು ಕಾರಣ ಅಲ್ಲಿ ಪುತ್ತೂರಿನ ಅಸಿಸ್ಟೆಂಟ್ ಕಮೀಶನರ್‌ರವರನ್ನು ಆಡಳಿತಾಧಿಕಾರಿಯಾಗಿ ನೇಮಕ ಮಾಡಿದ್ದರಿಂದಲೇ ಎನ್ನುವುದನ್ನು ಹೇಳಬಯಸುತ್ತೇನೆ. ಇವರು ತಮ್ಮ ಅಧಿಕಾರಾವಧಿಯಲ್ಲಿ ಯಾರು ಯಾರು ತೆರಿಗೆಯನ್ನು ಕೊಡದೇ ಮಾರಾಟ ಮಾಡುತ್ತಿದ್ದರೋ ಅಂತವರನ್ನು ಪತ್ತೆ ಹಚ್ಚಿ ತೆರಿಗೆಯನ್ನು ವಸೂಲಿ ಮಾಡತಕ್ಕಂಥ ಕೆಲಸವನ್ನು ಮಾಡಿದರು. ಆದರೆ ಅವರನ್ನು ಸರ್ಕಾರ ಈಗ ವಿಕಾವಿಕಿಯಾಗಿ ಬದಲಾವಣೆ ಮಾಡಿ ಆಡಳಿತಾಧಿಕಾರಿಯನ್ನಾಗಿ ತಹಸೀಲ್ದಾರ್‌ರವರನ್ನು ಮಾಡಿದ್ದಾರೆ. ಈಗ ತೆರಿಗೆ ಕೊಡದೇ ಮಾರಾಟ ಮಾಡುವ ವ್ಯಾಪಾರಸ್ತರ ಜೊತೆ ಈಗಿರುವ ತಹಸೀಲ್ದಾರ್ ಇರಬಹುದು, ಕೃಷಿ ಉತ್ಪನ್ನ ಮಾರುಕಟ್ಟೆ ಅಧಿಕಾರಿಗಳಿರಬಹುದು, ಇವರು ಶಾಮೀಲಾಗಿದ್ದಾರೆ. ಇದರ ಬಗ್ಗೆ ಸ್ಪಷ್ಟವಾಗಿ ಉತ್ತರ ಕೊಡಬೇಕು.

ಶ್ರೀ ಡಿ.ವಿ. ಸದಾನಂದಗೌಡ :— ಅಧ್ಯಕ್ಷರೆ, 1998-99ರಲ್ಲಿ ಅಡಿಕೆಗೆ ಹೆಚ್ಚು ಧಾರಣೆ ಇತ್ತು. 1997-98, 1998-99ರಲ್ಲಿ ಪುತ್ತೂರು ಹಾಗೂ ಸುಳ್ಯದಲ್ಲಿ 40 ಲಕ್ಷ ರೂಪಾಯಿ ತೆರಿಗೆ ವಸೂಲಿ ಆಗಿದ್ದದ್ದು ಕೇವಲ ಒಂದೇ ವರ್ಷದಲ್ಲಿ ಸುಮಾರು 60 ರಿಂದ 65 ಲಕ್ಷ ರೂಪಾಯಿಗಳನ್ನು ತೆರಿಗೆ ವಸೂಲಿ ಮಾಡಲಿ ಕ್ರಮ ತೆಗೆದುಕೊಂಡಿರುವಂಥ ಸಂದರ್ಭಗಳು ಇವೆ. ಆದಕಾರಣ ಇಂಥ ಒಳ್ಳೆಯ ಅಧಿಕಾರಿ ಎ.ಪಿ.ಎಂ.ಸಿ.ಯಲ್ಲಿರಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಎ.ಪಿ.ಎಂ.ಸಿ.ಯ ನಿಲುವೇನು ಎಂಬ ಬಗ್ಗೆ ಹೇಳಬೇಕು. ಈಗ ಸುಳ್ಯ ಮತ್ತು ಪುತ್ತೂರಿನಲ್ಲಿ ಅಧಿಕಾರಿ ಬದಲಾವಣೆಯಾದ ಮೇಲೆ ಬಹುಶ: ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ ಯಾವುದೇ ರೀತಿಯ ತೆರಿಗೆ ವಸೂಲಿಯಾಗುತ್ತಿಲ್ಲವೆಂದು ಹೇಳಬಯಸುತ್ತೇನೆ. ಅಲ್ಲಿ ಸುಮಾರು ಏಳು ವರ್ಷಗಳಿಂದ 7 ಕೋಟಿ ರೂಪಾಯಿ ಖರ್ಚು ಮಾಡಿದ್ದರೂ ಇನ್ನೂ ಮಾರುಕಟ್ಟೆ ಪ್ರಾಂಗಣವಾಗಿಲ್ಲ. ಆದುದರಿಂದ ಹೆಚ್ಚು ಟ್ಯಾಕ್ಸ್ ಕಲೆಕ್ಟ್ ಮಾಡುವ ಅಧಿಕಾರಿ ಬೇಕೋ ಅಥವಾ ತೆರಿಗೆ ಕಲೆಕ್ಟ್ ಮಾಡದ ಅಧಿಕಾರಿ ಬೇಕೋ ಎಂಬ ಬಗ್ಗೆ ಎ.ಪಿ.ಎಂ.ಸಿ.ಯ ಸ್ಪಷ್ಟ ನಿಲುವೇನು ಎಂಬ ಬಗ್ಗೆ ಹೇಳಬೇಕು.

ಶ್ರೀ ಆರ್.ಬಿ. ತಿಮ್ಮಾಪುರ :— ಅಧ್ಯಕ್ಷರೆ, ಯಾವ ಅಧಿಕಾರಿಗೆ ಛಾರ್ಜ್ ಕೊಡಬೇಕು ಎಂಬ ವಿಷಯ ಆಡಳಿತಾತ್ಮಕವಾದುದು. ಅದು ಇಲ್ಲಿ ಪ್ರಸ್ತಾಪವಾಗಿದೆ. ಒಬ್ಬರು ದಕ್ಷರು ಇದ್ದಾರೆ, ಇನ್ನೊಬ್ಬರು ಅದಕ್ಷರಿದ್ದಾರೆ ಎಂದು ಹೇಳುವುದು ಸರಿಯಲ್ಲ. ಅಸಿಸ್ಟೆಂಟ್ ಕಮೀಷನರ್‌ಗೆ ನಾವು ಚಾರ್ಜ್ ಕೊಟ್ಟ ಮೇಲೆ ನಂತರ ಅಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ತಹಸೀಲ್ದಾರ್ ಅವರನ್ನು ಮಾಡಿದರೆ ಇನ್ನು ಹೆಚ್ಚು ಸಮರ್ಪಕವಾಗಿ ಮಾಡಬಹುದು ಎನ್ನುವ ಉದ್ದೇಶ ಇಟ್ಟುಕೊಂಡು ಅಲ್ಲಿ ತಹಸೀಲ್ದಾರ್ ಲೋಕಲ್‌ನಲ್ಲಿ ಇರುತ್ತಾರೆ ಎಂದು ಚೇಂಜ್ ಮಾಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಅವರು ಏನಾದರೂ ತಪ್ಪು ಕೆಲಸವನ್ನು ಮಾಡಿದರೆ ಅಥವಾ ಕಡಿಮೆ ವಸೂಲು ಮಾಡಿ ಆ ವ್ಯಾಪಾರಸ್ಥ ಬಂಧುಗಳಿಗೆ ಸಹಕರಿಸುತ್ತಿದ್ದರೆ ಅಂತಹವರ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಒಬ್ಬ ಅಧಿಕಾರಿ ದಕ್ಷ ಇನ್ನೊಬ್ಬ ಅಧಿಕಾರಿ ಅದಕ್ಷ ಎನ್ನುವಂತಹ ಸರ್ಟಿಫಿಕೇಟ್ ಈ ವೇಳೆಯಲ್ಲಿ ಕೊಡುವುದು ಬೇಡ, ಅದನ್ನು ಕಾದು ನೋಡಿ ಆನಂತರ ಮಾಡೋಣ ಎಂದು ಹೇಳುತ್ತಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ :— ಪುತ್ತೂರಿನಲ್ಲಿ ತಾವು ಏನು ತಹಸೀಲ್ದಾರ್‌ಗೆ ಹ್ಯಾಂಡ್ ಓವರ್ ಮಾಡಿದ್ದೀರಿ, ಆ ತಹಸೀಲ್ದಾರ್ ಆಸ್ಪತ್ರೆಯಲ್ಲಿ ಇದ್ದಾರೆ. ಅವರು ಈಗ ಇಲ್ಲ.

ಶ್ರೀ ಎಂ.ಎಸ್. ಆತ್ಮಾನಂದ :— ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ಮಾರುಕಟ್ಟೆ ಸಮಿತಿಯಲ್ಲಿ ಕೂಡ ಬೇರೆ ಬೇರೆ ಕೃಷಿ ಉತ್ಪನ್ನಗಳಿಂದ ಸುಮಾರು ಕೋಟ್ಯಾಂತರ

ರೂಪಾಯಿಗಳು ಮಾರುಕಟ್ಟೆ ಶುಲ್ಕ ಸಂಗ್ರಹವಾಗಿರತಕ್ಕಂಥಾದ್ದು ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ಹಿಂದೆ ಕೃಷಿ ಉತ್ಪನ್ನಗಳನ್ನು ಸಾಗಿಸತಕ್ಕಂಥ ರಸ್ತೆಗಳನ್ನು ಕೃಷಿ ಮಾರುಕಟ್ಟೆ ಉತ್ಪನ್ನ ಸಂಸ್ಥೆಗಳಿಂದ ತೆಗೆದುಕೊಂಡು ರೈತರು ಸರಾಗವಾಗಿ ಕೃಷಿ ಉತ್ಪನ್ನಗಳನ್ನು ಸಾಗಿಸುವಂತಹ ವ್ಯವಸ್ಥೆ ಮಾಡಿಕೊಡುವುದಕ್ಕೆ ಅದ್ಯತೆ ಕೊಡುತ್ತಿದ್ದರು. ಆದರೆ ಈಗ ಆ ಕಾರ್ಯಕ್ರಮವನ್ನು ಈ ಕೃಷಿ ಉತ್ಪನ್ನ ಮಾರುಕಟ್ಟೆ ಸಂಸ್ಥೆ ತೆಗೆದುಕೊಳ್ಳುವುದಕ್ಕೆ ಏನಾದರೂ ಅಡೆತಡೆಗಳು ಇದೆಯೇ? ಅದರ ಜೊತೆಗೆ ತೂಕದಲ್ಲಿ ವ್ಯತ್ಯಾಸಗಳು ಆಗತಕ್ಕಂಥಾದ್ದು, ಅದಕ್ಕೋಸ್ಕರ ಎಲೆಕ್ಟ್ರಾನಿಕ್ ವೇಯಿಂಗ್ ಮೆಷಿನ್‌ಗಳನ್ನು ಹಾಕಬೇಕೆಂದು ಸರ್ಕಾರದಿಂದ ನಿರ್ದೇಶನ ಇದ್ದರೂ ಕೂಡ ಅನೇಕ ಮಾರುಕಟ್ಟೆ ಸಂಸ್ಥೆಗಳಲ್ಲಿ ಇರತಕ್ಕಂಥ ವ್ಯಾಪಾರಿಗಳಾಗಲಿ, ದಲ್ಲಾಳಿಗಳಾಗಲಿ ಎಲೆಕ್ಟ್ರಾನಿಕ್ ವೇಯಿಂಗ್ ಮೆಷಿನ್‌ಗಳನ್ನು ಹಾಕುವುದಕ್ಕೆ ಇನ್ನು ಮನಸ್ಸು ಮಾಡಿಲ್ಲ. ಎಲೆಕ್ಟ್ರಾನಿಕ್ ವೇಯಿಂಗ್ ಮೆಷಿನ್‌ಗಳನ್ನು ಕಡ್ಡಾಯವಾಗಿ ಹಾಕಬೇಕು. ಆದರಿಂದ ತೂಕದಲ್ಲಿ ಆಗತಕ್ಕಂಥ ಮೋಸವನ್ನು ತಡೆಯಬೇಕೆಂದು ಕೇಳಿಕೊಳ್ಳುತ್ತೇನೆ.

ಆರ್.ಬಿ. ತಿಮ್ಮಾಪುರ್ :— ನಾನು ಈಗಾಗಲೇ ರಸ್ತೆಗಳ ವಿಷಯದಲ್ಲಿ ಹೇಳಿದ್ದೇನೆ. ಒಬ್ಬರು ಶಾಸಕರಿಗೆ 15 ಲಕ್ಷ ರೂಪಾಯಿ ಕೊಡಬೇಕೆಂದು ಹಿಂದಿನ ಸರ್ಕಾರದಲ್ಲಿ ತಂದು ಅದನ್ನು ಆಗಲೇ ಬಂದ್ ಮಾಡತಕ್ಕಂಥ ವ್ಯವಸ್ಥೆಯಾಯಿತು. ಕೆಲವು ಸಂಸ್ಥೆಗಳಲ್ಲಿ ಮೂರು ಲಕ್ಷ ನಾಲ್ಕು ಲಕ್ಷ ರೂಪಾಯಿ ಹಣ ಇರುತ್ತದೆ. ಈ ವರ್ಷ 15 ಲಕ್ಷ ಮತ್ತೆ 15 ಲಕ್ಷ ಒಟ್ಟು 30 ಲಕ್ಷ ರೂಪಾಯಿ ಹೀಗೆ ಕೊಡುತ್ತಾ ಹೋದರೆ, ಸಾಲದ ರೂಪದಲ್ಲಿ ಕೊಡುವುದರಿಂದ, ಅದೇನು ಪರಿಹಾರ ಮಾಡಿದ ಹಾಗೆ ಆಗುವುದಿಲ್ಲ. ಆದುದರಿಂದ, ಅಂತಹ ಒಂದು ಒಳ್ಳೆಯ ಯೋಚನೆಯನ್ನು ಇಟ್ಟುಕೊಂಡು ರೂಲ್ ಅಮೆಂಡ್‌ಮೆಂಟ್ ಈಗತಾನೆ ಮಾಡುತ್ತಿದ್ದು, ಮೂವತ್ತು ದಿವಸಗಳಲ್ಲಿ ಅದು ಹೊರಬೀಳುತ್ತದೆ. ಯಾವ ಎ.ಪಿ.ಎಂ.ಸಿ. ಸಂಸ್ಥೆಯಲ್ಲಿ ಹಣ ಇದೆ ಆ ಹಣದಲ್ಲಿ ಇಂತಿಷ್ಟು ಪರ್ಸೆಂಟ್ ರೋಡ್‌ಗೆ ತೆಗೆದಿಡಬೇಕೆನ್ನುವಂತಹ ಹೊಸ ವ್ಯವಸ್ಥೆಯನ್ನು ನಾವು ಮಾಡಿದ್ದೇವೆನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕಾಗಿ ಎರಡು ರೂಪಾಯಿ ಸೆಸ್ ಕಲೆಕ್ಟ್ ಮಾಡಬೇಕೆಂದು ಏನು ನಿರ್ಧಾರ ಮಾಡಿತ್ತು, ಅದರಲ್ಲಿ ಒಂದು ಪರ್ಸೆಂಟ್ ರೋಡ್‌ಗಾಗಿ ಇನ್ನೊಂದು ಪರ್ಸೆಂಟ್ ಮಾರುಕಟ್ಟೆ ಅಭಿವೃದ್ಧಿಗಾಗಿ ಎಂದು, ಆದರೆ ಆ ಸೆಸ್ ಕಲೆಕ್ಟ್ ಮಾಡುವುದಕ್ಕೆ ಪ್ರತಿರೋಧ ಬಂದಿದ್ದರಿಂದ ಹಾಗೆ ಬಿಟ್ಟಿದ್ದಾರೆ. ಈಗ ನಾವು ಎರಡು ರೂಪಾಯಿ ಸೆಸ್ ಕಲೆಕ್ಟ್ ಮಾಡುತ್ತಿಲ್ಲ. ಆದುದರಿಂದ ಈಗಿರತಕ್ಕಂಥ ವ್ಯವಸ್ಥೆಯಲ್ಲಿ ತೊಂದರೆ ಇದೆ. ಇನ್ನು ತಾವು ತೂಕದ ಬಗ್ಗೆ ಹೇಳಿದಿರಿ. ಎಲೆಕ್ಟ್ರಾನಿಕ್ ವೇಯಿಂಗ್ ಮೆಷಿನ್ ಏನು ಲೈಸೆನ್ಸ್ ರಿನ್ಯೂವಲ್ ಮಾಡುತ್ತೇವೆ ಆಗ ಕಂಪಲ್ಸರಿ ಅಳವಡಿಸಬೇಕೆಂದು ಎಂದು ಹೇಳಿದ್ದೇವೆ. ಅವರ ಹತ್ತಿರ ಬಾಂಡ್ ಬರೆಸಿಕೊಂಡು ಎಲೆಕ್ಟ್ರಾನಿಕ್ ವೇಯಿಂಗ್ ಮೆಷಿನ್ ಕಂಪಲ್ಸರಿಯಾಗಿ ಅಳವಡಿಸಿಕೊಳ್ಳಬೇಕೆಂದು ಸೂಚನೆ ನೀಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಪ್ರಭಾಕರ ಬಂಗೇರ :— ಮಾನ್ಯ ಅಧ್ಯಕ್ಷರೇ, ನಾನು ಬೆಳ್ತಂಗಡಿ ತಾಲ್ಲೂಕಿನ ಮಾರುಕಟ್ಟೆ ಸಮಿತಿ ಪರವಾಗಿ ಕೇಳುತ್ತಿದ್ದೇನೆ. 1997-98ನೇ ಸಾಲಿನಲ್ಲಿ ಇಲ್ಲಿ ಕೊಟ್ಟಂತಹ ವರದಿ ಪ್ರಕಾರ ಇಲ್ಲ. ಅವರು ಕೊಟ್ಟಿರುವಂತಾದ್ದು 1999-2000ಕ್ಕೆ ಕೊಟ್ಟಿದ್ದಾರೆ. 1997-98 ಹಾಗೂ 1999-2000 ಆ ವರ್ಷದಲ್ಲಿ ಎಲ್ಲಾ ಎಂ.ಪಿ.ಎಂ.ಸಿ.ಯಲ್ಲಿ ಶುಲ್ಕ ವಸೂಲು ಮಾಡುತ್ತಿದ್ದರು. ಬೆಳ್ತಂಗಡಿ ಮಾರುಕಟ್ಟೆ ಸಮಿತಿ ಪ್ರಾಂಗಣ ಯಾವಾಗ ಪ್ರಾರಂಭವಾಗುತ್ತದೆ.

ಆರ್.ಬಿ. ತಿಮ್ಮಾಪುರ್ :— ಅದಕ್ಕೆ ಪ್ರಶ್ನೆಯನ್ನು ಪ್ರತ್ಯೇಕವಾಗಿ ಕಳುಹಿಸಲಿ ಉತ್ತರ ಕೊಡುತ್ತೇನೆ.

ಅಧ್ಯಕ್ಷರು :— ಇಲ್ಲಿ ಏನಾಗುತ್ತದೆ ಎಂದರೆ ನಿಮ್ಮ ಕ್ಷೇತ್ರದ ಮಾರುಕಟ್ಟೆ ಬಗ್ಗೆ ಪ್ರಶ್ನೆ ಕೇಳಿದರೆ ಅವರ ಹತ್ತಿರ ಮಾಹಿತಿ ಇರುವುದಿಲ್ಲ. ಜನರಲ್ ಇನ್‌ಫರ್ಮೇಷನ್ ಕೊಟ್ಟಿದ್ದಾರೆ ಹೊರತು, ತಾವು ಕೇಳಿದ ಪ್ರಶ್ನೆಗೆ ಬೇರೆ ಕಳುಹಿಸಿ ಎಂದು ಹೇಳುತ್ತಾರೆ. ಈ ರೀತಿ ಪ್ರಶ್ನೆ ಕೇಳುವುದರಿಂದ ಏನೂ ಉಪಯೋಗವಾಗುವುದಿಲ್ಲ.

ಶ್ರೀ ಕೆ. ಪ್ರಭಾಕರ ಬಂಗೇರ :— ಮಾನ್ಯ ಅಧ್ಯಕ್ಷರೆ, 1999-2000ನೇ ಇಸವಿಗೆ ಸಂಬಂಧಪಟ್ಟ ಮಾಹಿತಿ ಕೊಟ್ಟಿದ್ದಾರೆ.

ಅಧ್ಯಕ್ಷರು :— ಈ ಪ್ರಶ್ನೆಗೆ ಸೀಮಿತವಾಗಿ ಕೇಳಿದರೆ ಸರಿ. ಪ್ರತಿಯೊಬ್ಬರೂ ಅದೇ ಉತ್ತರ ಕೇಳಿಕೊಂಡು ಬಿಡಿ. ನಿಮ್ಮ ನಿಮ್ಮ ಮಾರುಕಟ್ಟೆ ವಿಷಯ ಕೇಳಿದರೆ ಅವರ ಹತ್ತಿರ ಎಲ್ಲಿ ಮಾಹಿತಿ ಇರುತ್ತದೆ? ಇರುವುದಿಲ್ಲ. ಅವರು ಸೆಪರೇಟ್ ಕ್ವೆಶ್ಚನ್ ಕೇಳಿ ಎಂದು ಹೇಳಿದ ಮೇಲೆ ಪುನಃ ಏಕೆ ಪ್ರಶ್ನೆ ಕೇಳುತ್ತೀರಿ?

ಶ್ರೀ ಎಸ್. ಅಂಗಾರ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಾನಂದ ಗೌಡರು ಹೇಳಿದರು. ಸರ್ಕಾರದ ಕಡೆಯಿಂದ ಮಧ್ಯವರ್ತಿಗಳಿಗೆ ಅವಕಾಶ ಕೊಡುತ್ತೀರಾ ಅಥವಾ ಎ.ಪಿ.ಎಂ.ಸಿ.ಗೆ ಕೊಡುತ್ತೀರಾ ಎಂದು ಹೇಳಿ. ನನ್ನ ಪ್ರಶ್ನೆ ಇಷ್ಟೆ, ಎ.ಪಿ.ಎಂ.ಸಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಟ್ಯಾಕ್ಸ್ ಸಂಗ್ರಹ ಮಾಡುವುದಾದರೆ, ಮಧ್ಯವರ್ತಿಗಳು ಟ್ಯಾಕ್ಸ್‌ನ್ನು ನೀಡದೆ ಮಾರಾಟ ಮಾಡುವುದರ ಬಗ್ಗೆ ಯಾವ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತೀರಾ? ಎರಡನೆಯದಾಗಿ ಒಬ್ಬ ಒಳ್ಳೆಯ ಮತ್ತು ತಪ್ಪಿತಸ್ಥ ಅಧಿಕಾರಿ ನಾವು ಮಾಡುವುದಿಲ್ಲವೆಂದು ಹೇಳಿದಿರಿ. ನನ್ನ ಅನಿಸಿಕೆ ಏನೆಂದರೆ ಒಳ್ಳೆಯ ಅಧಿಕಾರಿಯನ್ನು ಒಳ್ಳೆಯವನು ಎಂದು ತಪ್ಪಿತಸ್ಥನನ್ನು ತಪ್ಪಿತಸ್ಥ ಅಧಿಕಾರಿ ಎಂದು ಹೇಳಬೇಕು. ಆದರೆ ನೀವು ಎರಡನ್ನು ಕೂಡ ಸಮದೂಗಿಸಿಕೊಂಡು ಹೇಳಿದರೆ ನಾವು ಒಪ್ಪುವುದಿಲ್ಲ. ಆದುದರಿಂದ, ಸರ್ಕಾರ ಒಳ್ಳೆಯ ಆದಾಯವನ್ನು ತರುವಂತಹ ಅಧಿಕಾರಿ ಯಾರಿದ್ದಾರೆ ಅವರಿಗೆ ಪ್ರೋತ್ಸಾಹ ಕೊಡಿ. ಈಗ

ತಹಸೀಲ್ದಾರ್‌ಗೆ ಅಧಿಕಾರ ಕೊಟ್ಟಮೇಲೆ, ಅವರು ಯಾವುದು ಟ್ಯಾಕ್ಸ್ ಸಂಗ್ರಹ ಮಾಡುವುದಿಲ್ಲ. ಸುಳ್ಯ ಮತ್ತು ಪುತ್ತೂರು ತಾಲ್ಲೂಕಿಗೆ ಓಡಾಟ ಮಾಡುತ್ತಿದ್ದಾರೆ. ಅದಕ್ಕಾಗಿ ಒಂದು ಚುನಾವಣೆ ಮಾಡಿ. ಇದರ ಬಗ್ಗೆ ಸ್ಪಷ್ಟವಾಗಿ ಹೇಳಿ.

ಶ್ರೀ ಆರ್.ಬಿ. ತಿಮ್ಮಾಪುರ್:— ಅಸಿಸ್ಟೆಂಟ್ ಕಮೀಷನರ್ ಅವರ ಚಾರ್ಜ್‌ನ್ನು ತೆಗೆದು ಹಾಕಿ ಬಹುಶಃ ಒಂದೆರಡು ತಿಂಗಳು ಆಗಿರಬಹುದು. ಈ ಎರಡು ತಿಂಗಳಿನಲ್ಲಿ ಏನು ಸೆಟ್ಟುಕಡಿಮೆಯಾದರೆ ಎನ್ನುವ ರಿಪೋರ್ಟ್ ತರಿಸುತ್ತೇನೆ. ಆನಂತರ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್:— ಮಾನ್ಯ ಅಧ್ಯಕ್ಷರೆ, ರೋಡ್‌ಗಾಗಿ ಎ.ಪಿ.ಎಂ.ಸಿಗಳಿಗೆ ಏನು ಸಾಲ ಕೊಟ್ಟಿತ್ತು ಅದನ್ನು ಮಾರುಕಟ್ಟೆ ಬೋರ್ಡ್‌ನಿಂದ ಅನುದಾನವಾಗಿ ಕೊಡಬೇಕೆಂದು ಹಿಂದೆ ತೀರ್ಮಾನ ಮಾಡಿತ್ತು. ಆದರೆ, ಅದು ಆದೇಶವಾಗಲಿಲ್ಲ. ಸಣ್ಣ ಸಣ್ಣ ಮಾರುಕಟ್ಟೆ ಸಂಸ್ಥೆಗಳಿಗೆ ಕೆಲಸವೇ ಇಲ್ಲ. ಎಲ್ಲಾ ಇದೇ ರೀತಿ ಸಾಲ ತುಂಬುವುದೇ ಆಗಿದೆ. ದಯವಿಟ್ಟು ಅದನ್ನು ತಾವು ಅನುದಾನವಾಗಿ ಪರಿವರ್ತನೆ ಮಾಡುತ್ತೀರಾ?

ಶ್ರೀ ಆರ್.ಬಿ. ತಿಮ್ಮಾಪುರ್:— ಮಾನ್ಯ ಅಧ್ಯಕ್ಷರೇ, ಬೋರ್ಡ್ ಮುಖಾಂತರ ನಾವು ಅದನ್ನು ಸಾಲದ ರೂಪದಲ್ಲಿ ಕೊಟ್ಟಿಲ್ಲ. ಕೆಲವು ಎ.ಪಿ.ಎಂ.ಸಿಗಳಿಗೆ ಎಲ್ಲಿ ಹೆಚ್ಚಿನ ಹಣ ಇತ್ತು ಆ ಹಣವನ್ನು ಅಲ್ಲಿ ಸಾಲದ ರೂಪದಲ್ಲಿ ಕೊಟ್ಟಿದ್ದೇವೆ. ಸಂಸ್ಥೆಯವರಿಗೆ ನಾವು ಹಣ ಕೊಡಬೇಕಾಗುತ್ತದೆ. ಒಟ್ಟಾರೆ ಹಣವನ್ನು ಬೋರ್ಡ್ ಮುಖಾಂತರ ತುಂಬಬೇಕು ಅಷ್ಟು ಹಣ ಬೋರ್ಡ್‌ನಲ್ಲಿ ಇವತ್ತಿನ ದಿವಸ ಇಲ್ಲ. ಅದನ್ನು ಯಾವ ರೀತಿ ಮಾಡಬೇಕು. ಎನ್ನುವುದರ ಬಗ್ಗೆ ಮಾನ್ಯ ಪಾಟೀಲರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಸೂಕ್ಷ್ಮತೆಯಿಂದ ಪರಿಶೀಲಿಸುತ್ತೇನೆ.

ಹುಲಸೂರು ಕ್ಷೇತ್ರದಿಂದ ಬೆಂಗಳೂರು ನಗರಕ್ಕೆ ಬಸ್ಸು ಸೌಲಭ್ಯಗಳು.

487(4552) ಶ್ರೀ ರಾಜೇಂದ್ರ ವರ್ಮ (ಹುಲಸೂರ):— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಲಸೂರು ಮತಕ್ಷೇತ್ರದ ಕೇಂದ್ರ ಸ್ಥಾನದಿಂದ ನೇರವಾಗಿ ಬೆಂಗಳೂರು ನಗರಕ್ಕೆ ಬರಲು ಯಾವುದೇ ಎಕ್ಸ್‌ಪ್ರೆಸ್ ಇಲ್ಲವೆ ಅಲ್ಟ್ರಾ ಡೀಲಕ್ಸ್ ಬಸ್ಸಿನ ಸೌಲಭ್ಯವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು

ಆ) ಈ ಸ್ಥಳದಿಂದ ಬೆಂಗಳೂರಿಗೆ ಪ್ರಯಾಣ ಮಾಡಬೇಕಾದ ಪ್ರಯಾಣಿಕರು ಬಸವಕಲ್ಯಾಣ ಇಲ್ಲವೆ ಹುಮ್ನಾಬಾದಿಗೆ ಬರುವ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;